ಸುಭಾಷನಿಗೆ ಮದುವೆ ಮಾಡಿಸಿದ ಅಪ್ಪ, ಗಂಡ ಹೆಂಡತಿ ಒಟ್ಟಾಗದಂತೆ ತಡೀತಾ ಇದ್ದ ಎಂಬ ವಿಚಾರ ಹೇಳಿದಾಗಲಂತೂ ತಬ್ಬಿಬ್ಬಾದೆ ನಾನು. ''ಮದುವೆ ಹೇಗಾಯಿತು ಗೊತ್ತುಂಟಾ? ಅಪ್ಪ ಅಮ್ಮ ಮಕ್ಕಳೆಲ್ಲ ಒಮ್ಮೆ ಇವರ ಹಳ್ಳಿಗೆ ಹೋಗಿದ್ದವರು, ವಾಪಸು ಬರುವಾಗ ಈ ಹುಡುಗಿಯನ್ನು ಕರದುಕೊಂಡು ಬಂದದ್ದು. 'ಸುಭಾಷನ ಹೆಂಡ್ತಿ' ಅಂತ ನಮಗೆಲ್ಲಾ ಹೇಳಿದ್ದನ್ನು ಬಿಟ್ರೆ ಒಂದು ಸಮಾರಂಭವಾಗಲೀ, ಔತಣವಾಗಲೀ ಇರಲೇ ಇಲ್ಲ'' ಅಂತ ಹೇಳಿದ್ದ. ಒಂದೆರಡು ಬಾರಿ ಕಂಪನಿ ಮೇನ್ ಗೇಟಿನ ಬಳಿ, ''ನೋಡಿ ಸಾಬ್... ಆ ರಿಕ್ಷಾದಲ್ಲಿ ಸುಭಾಷನ ತಂದೆ ಕಾಣ್ತಾ ಉಂಟಾ... ಸೊಸೆ ಜೊತೆ ಹೋಗ್ತಾ ಇದ್ದಾನೆ'' ಅಂತ ತೋರಿಸಿದ್ದ. ''ಆಸ್ಪತ್ರೆಗೋ, ಮಾರ್ಕೆಟ್ಟಿಗೋ ಇರಬಹುದು ಅಲ್ವಾ'' ಅಂದಿದಕ್ಕೆ ನಕ್ಕು, ''ನೀವ್ವೊಳ್ಳೆ... ನೀವು ಘಾಟ್ಕೋಪರ್ ಸ್ಟೇಶನ್ನಿನಿಂದ ಬರ್ತಾ ದಾರಿಯಲ್ಲಿ ಒಂದು ಕ್ಲಬ್ ನೋಡಿದ್ದೀರಲ್ವ. ಇವರು ಹೋಗೋದು ಅಲ್ಲಿಗೆ. ಅಪ್ಪ ಗ್ಯಾಂಬ್ಲಿಂಗ್ ಆಡ್ತಾನೆ, ಸೊಸೆ ಚಂದ ನೋಡ್ತಾಳೆ''. ನಾನು ಸಿಟ್ಟಾಗಿದ್ದೆ. ''ಗೊತ್ತಿಲ್ಲದೆ, ನೋಡದೆ ಹೀಗೆಲ್ಲ ಆಡಿಕೊಳ್ಳಬಾರದು'' ಅಂತ ಗದರಿಸಿದೆ. ನಕ್ಕು ಸುಮ್ಮನಾಗಿದ್ದ. ಆದರೆ, ಇದೇ ವಿಚಾರವನ್ನು ಕಂಪನಿಯಲ್ಲಿ ಮತ್ತೆ ಕೆಲವರು ಆಡಿಕೊಳ್ಳುವುದನ್ನು ಕೇಳುವಾಗ ಸಂಕಟವಾಗಿತ್ತು. ಕೈತುಂಬ ಸಂಬಳ, ಜೊತೆಗೆ ಓವರ್ ಟೈಮ್ ಭತ್ತೆ, ವರ್ಷಕ್ಕೊಮ್ಮೆ ದೊಡ್ಡ ಮೊತ್ತದ ಬೋನಸ್ಸು ಅಂತೆಲ್ಲ ಸಿಗ್ತಾ ಇದ್ದಾಗ ಕಂಪನಿಯ ಹಲವು ಮಂದಿ ಕೆಲಸಗಾರರು ಶೋಕಿ ಬೆಳೆಸಿಕೊಂಡಿದ್ದರು. ಕ್ಲಬ್ಬು, ಜೂಜು, ಕುಡಿತ, ಹಾದರ ಇವೆಲ್ಲವೂ ಇತ್ತು. ಸುಭಾಷನ ಅಪ್ಪನೂ ಇದೇ ರೀತಿಯ ಶೋಕಿಲಾಲನಂತೆ. ಕುಡಿತ ಒಂದು ಬಿಟ್ಟು ಮಿಕ್ಕೆಲ್ಲವೂ ಇತ್ತಂತೆ. ರಿಟೈರ್ ಆದ ಬಳಿಕ ಮಗನ ಸಂಬಳ ಎಲ್ಲದಕ್ಕೂ ಸಾಲುತ್ತಿರಲಿಲ್ಲ. ಆದರೆ ಶೋಕಿ ಬಿಡಲೊಲ್ಲ.

''ಹಳೆ ನೆನಪಿನಲ್ಲಿ ಈಗ ವಾರಕ್ಕೊಮ್ಮೆಯಾದರೂ ಹೋಗ್ತಾನೆ ಸೊಸೆಯೊಂದಿಗೆ.''

''ಅಲ್ಲಯ್ಯ, ಹಾಗೆ ಹೋಗುವುದಾದರೆ ತನ್ನ ಹೆಂಡತಿಯನ್ನಲ್ವಾ ಕರೆದುಕೊಂಡು ಹೋಗೋದು? ನಾನು ಸುಭಾಷನ ಅಪ್ಪನ ಬಗ್ಗೆ ಹೇಳ್ತಾ ಇರೋದು.''

ಜೋರಾಗಿ ನಕ್ಕು, ''ಒಮ್ಮೆ ಮೌಶಿಯನ್ನು ಕರೆದುಕೊಂಡು ಹೋಗಿದ್ದ ಈ ಮನುಷ್ಯ. ಅಲ್ಲಿ ಇವನ ಜೊತೆಗಾರನೊಬ್ಬನಿಗೆ ಚಪ್ಪಲಿ ತೋರ್ಸಿದ್ದರಂತೆ ಮೌಶಿ. ಅದಾದ ಮೇಲೆ, ಒಬ್ಬನೇ ಹೋಗ್ತಾ ಇದ್ದವನು ಈಗ ಸೊಸೆಯನ್ನು ಕರೆದುಕೊಂಡು ಹೋಗ್ತಾನೆ. ಈಗ ಯಾವ ತೊಂದರೆ ಇಲ್ಲ'' ಅಂತ ಕಣ್ಣು ಮಿಟುಕಿಸಿ ಹೇಳಿದ್ದ ದೀಪಕ್. ಇದರಲ್ಲಿ ಏನೋ ಗುಟ್ಟು ಇದೆ ಅಂತ ಒಮ್ಮೆ ಕೇಳಿದ್ದೆ, ''ಅಲ್ಲ... ಮನೆಯಲ್ಲಿ ತಾಯಿ ಕೂಡಾ ಇದ್ದಾರೆ, ಆದರೂ ಸೊಸೆಯ ಜೊತೆ ಹೀಗೆ? ಅದು ಹೇಗೆ ಸಾಧ್ಯ?''

''ಬೆಕ್ಕು ಹಾಲು ಕುಡಿದ ಹಾಗೆ ಸಾಬ್. ಹೇಳ್ಲಿಕ್ಕೆ ನಾಚಿಕೆಯಾಗ್ತದೆ, ಸಿಟ್ಟೂ ಬರ್ತದೆ ಕೆಲವೊಮ್ಮೆ. ಅಪ್ಪ ಸೊಸೆ ರಿಕ್ಷಾದಲ್ಲಿ ಓಡಾಟ ಮಾಡಿದ್ರೂ ಮನೆಗೆ ಬೇಕಾದ ನಿತ್ಯ ಸಾಮಗ್ರಿಗೆ ಮೌಶಿಯನ್ನು ಕಳಿಸ್ತಾನೆ, ಅದೂ ಮಧ್ಯಾಹ್ನ ಊಟವಾದ ಮೇಲೆ. ಆಕೆ ಒಂದೆರಡು ಗಂಟೆ ಹೊತ್ತು ಮನೆಯಿಂದ ಹೊರಗಿರ್ತಾಳೆ. ಪಾಪ ಆಕೆ ವಿವೇಚನೆ ಇದ್ದೇ ಅಷ್ಟು ಸಮಯ ತೆಗೆದುಕೊಳ್ಳುವುದು. ಮನೆಯಲ್ಲಿ ಏನು ನಡೀತಾ ಇದೆ ಎನ್ನುವುದು ಗೊತ್ತಿಲ್ಲದೇ ಇರ್ತದಾ!? ನಮಗೆ ಯಾಕೆ ಇವರ ಮನೆ ವಿಚಾರ ಅಂತ ಎಲ್ಲರೂ ಸುಮ್ಮನಿರುತ್ತಿದ್ದರು'' ಎಂದ. ''ಅಂದರೆ, ಕ್ವಾಟ್ರರ್ಸಿನಲ್ಲಿ ಎಲ್ಲರಿಗೂ ತಿಳಿದ ವಿಚಾರವೇ ಇದು?'' ಎನ್ನುವ ಆಶ್ಚರ್ಯ ನನಗೆ. ''ಮಗನಿಗೆ ಮದುವೆ ಮಾಡಿಸಿದ್ದು ಹೆಸರಿಗೆ ಮಾತ್ರ ಸಾಬ್. ಅಪ್ಪ ಸೊಸೆಯನ್ನು ಇಟ್ಟುಕೊಂಡಿದ್ದಾನೆ. ಅದಕ್ಕೇ ಮಗನನ್ನು ಇವಳ ಜೊತೆ ಯಾವುದಕ್ಕೂ ಬಿಡೋದಿಲ್ಲ, ಮಗನಿಗೆ ಮದುವೆ ಮಾಡಿಸಿ ಹಾದರದ ಖರ್ಚು ಉಳಿಸಿದ್ದಾನೆ ಮಾದರ್ ಚೋದ್'' ಅಂತ ಸಿಟ್ಟು ಹೊರ ಹಾಕಿದ್ದ, ದೀಪಕ್.

''ಈಗ ಸುಭಾಷ್ ನನ್ನ ಜೊತೆ ಕೆಲಸ ಮಾಡ್ತಾ ಇದ್ದಾನೆ. ಮೊದಲಿನ ಜನ ಅಲ್ಲ ಅವನೀಗ, ತುಂಬ ಚಾಲೂ ಆಗಿದ್ದಾನೆ'' ಅಂದನಲ್ಲ, ನಿನ್ನೆ ಮಾತಾಡಿದಾಗ. ಗುಂಡು ಗುಂಡಗೆ ತಿಂದುಂಡು ಬೆಳೆದ